**ಓ ಎಸ್ 41/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 10.07.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಬಿ ಎನ್ ಎಸ್ ವಕೀಲರಿಂದಃ**

ದಾವಾ ಆಸ್ತಿಯು ಮೂಲತಃ ವೆಂಕಟಶಟ್ಟಿಯವರಿಗೆ ಸೇರಿದ್ದು ಅವರು ಅದನ್ನು ಮಾದಶೆಟ್ಟಿಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಮಾದಶೆಟ್ಟಿರವರು ಆ ಸ್ವತ್ತನ್ನು ಪಾಂಡವಪುರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮಾರಾಟ ಮಾಡಿದ್ದರು ಎಂದರೆ ಸರಿ. ಆ ಜಮೀನಿನ ಒಟ್ಟು ವಿಸ್ತೀರ್ಣ 1 ಎಕರೆ 0.20 ಗುಂಟೆ ಎಂದರೆ ಸರಿ. ವೆಂಕಟಶೆಟ್ಟಿರವರು ತಮ್ಮ ಹೆಸರಿನಲ್ಲಿದ್ದ 1 ಎಕರೆ 0.20 ಗುಂಟೆ ಪೈಕಿ 1 ಎಕರೆ ಯನ್ನು ಮಾತ್ರ ಮಾದಶೆಟ್ಟಿರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಉಳಿಕೆ 0.20 ಗುಂಟೆ ಜಮೀನಿನ ಪೈಕಿ 1 ನೇ ಪ್ರತಿವಾದಿಗೆ 0.10 ಗುಂಟೆ ಮತ್ತು 2 ನೇ ಪ್ರತಿವಾದಿಗೆ 0.12 ಗುಂಟೆ ಜಮೀನನ್ನು ದಿನಾಂಕ 27.06.2005 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ಆ ಆಸ್ತಿಗಳ ಎಂ ಆರ್ ದಾಖಲೆಯು ಕೃಷ್ಣಶೆಟ್ಟಿರವರ ವಾರಸುದಾರರ ಹೆಸರಿನಲ್ಲಿ ದಾಖಲಾಗಿ ಬರುತ್ತಿದೆ ಎಂದರೆ ಸರಿಯಲ್ಲ.
ಎಂದರೆ ಸರಿಯಲ್ಲ.

ಈಗ ನನಗೆ ತೋರಿಸಿದ ದಾಖಲು ಅಸಲು ದಾವಾ ಸಂಖ್ಯೆಯ 279/2011 ರಲ್ಲಿ ನಾನು ನುಡಿದಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರ ಹಾಗೂ ಪಾಟೀ ಸವಾಲಿನ ದೃಢೀಕೃತ ನಕಲು ಆಗಿದೆ ಎಂದರೆ ಸರಿ. ಅದನ್ನು ನಿಶಾನೆ ಡಿ 1 ಎಂದು ಗುರುತಿಸಲಾಯಿತು. ಅದರಲ್ಲಿ ಇರುವ ನನ್ನ ಹೇಳಿಕೆಗಳಲ್ಲೂ ಸರಿ ಇದೆ.

ದಾವಾ ಆಸ್ತಿ ಪೈಕಿ ರಸ್ತೆ ಪಕ್ಕದ ಮೊದಲನೇ ನಿವೇಶನವನ್ನು ಸುಮಿತ್ರ ಎಂಬುವವರಿಗೆ ಮಾರಾಟ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸುಮಿತ್ರ ಕೋಂ ಎಂ ಜೆ ಲೋಕೇಶ್ ರವರರು ಪ್ರತಿವಾದಿಗಳ ವಿರುದ್ಧ ಓ ಎಸ್ 270/2017 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ನನ್ನ ವಕೀಲರಾದ ಎಂ ಎಸ್ ಕುಮಾರ್ ರವರು

ನಡೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಿತ್ರರವರು ಸಲ್ಲಿಸಿದ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರ ಅರ್ಜಿಯು ದಿನಾಂಕ 15.12.2018 ರಂದು ವಜಾಗೊಂಡಿದೆ ಎಂದರೆ ನನಗ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಕ್ರಯಕ್ಕೆ ಪಡೆದಾಗಿನಿಂದಲೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆಯೇ ಹೊರತು ನಾನು ಇಲ್ಲ ಎಂದರೆ ಸರಿಯಲ್ಲ. ಮಾದಶೆಟ್ಟಿರವರು ತಮ್ಮ ಪೂರ್ಣ ಸ್ವತ್ತನ್ನು ಪಾಂಡವಪುರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮಾರಾಟ ಮಾಡಿದ ಕಾರಣ ಅವರ ವಾರಸುದಾರರಿಗೆ ಯಾವುದೇ ಸ್ವತ್ತು ಉಳಿದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮಾದಶೆಟ್ಟಿರವರ ಹೆಂಡತಿ ನಿಂಗಮ್ಮ ಮತ್ತು ಮಕ್ಕಳಿಗೆ ಯಾವುದೇ ಆಸ್ತಿಯು ಮಾದಶೆಟ್ಟಿರವರಿಂದ ಉಳಿಸಿಕೊಳ್ಳದೆ ಇದ್ದ ಕಾರಣ ನಿಂಗಮ್ಮ ಮತ್ತು ಮಕ್ಕಳು ನನಗೆ ಯಾವುದೇ ನಿವೇಶನವನ್ನು ಮಾರಾಟ ಮಾಡದೆ ಇದ್ದರೂ ಸಹ ನಾನು ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಕೇಸು ಹಾಕಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಕ್ರಯಕ್ಕೆ ಪಡೆದಿರುವ ಆಸ್ತಿಗಳಲ್ಲಿ ಅವರು ಸ್ವಾಧೀನಾನುಭವವನ್ನು ಹೊಂದಿದ್ದಾರೆಯೇ ಹೊರತು ನಾನು ಕ್ರಯಕ್ಕೆ ಪಡೆದಿರುವ ಸ್ವತ್ತಿಗೆ ಅವರು ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಕ್ರಯಕ್ಕೆ ಪಡೆದಿರುವ ಸ್ವತ್ತು ಸರ್ವೆ ನಂಬರು ಸ್ವತ್ತಾಗಿದ್ದು ನಾನು ಕ್ರಯಕ್ಕೆ ಪಡೆದಿದರುವ ಸ್ವತ್ತು ನಿವೇಶನ ಆಗಿದೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ನೀಡದೆ ಇದ್ದರೂ ಸಹ ದುರುದ್ದೇಶಪೂರ್ವಕವಾಗಿ ನಾನು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**